ಮಂಡಿ ಕುಮಾರ್, ಬೆಂಗಳೂರು
ಕೋಪ ಬಂದಾಗ ಶಾಪ ಕೊಡುವ ದೇವರು ಪರಿಹಾರವನ್ನು ಸೂಚಿಸುತ್ತಾರೆ. ಏಕೆ?



ನಡೆಯಲಾಗದಂತೆ ಕಾಲು ಕಟ್ಟಿದ ಭಕ್ತನಿಂದ ತಪ್ಪಿಸಿಕೊಳ್ಳಬೇಕಲ್ಲ.

ಬಿ.ಆರ್. ಉಷಾ, ಕೆನಡಾ
ಫಾರಿನ್‌ನಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಚಿಕ್ಕ ಚಿಕ್ಕ ಬಟ್ಟೆ ತೊಡುತ್ತಾರೆ. ಏಕೆ?
ಅವರು ಅಲ್ಪತೃಪ್ತರಂತೆ.

ಕೆ.ಎಂ. ವಿಭೂತಿ, ಹರಿಹರ
ಭಾರತವೆಂಬ ರಥ ಧರ್ಮದಿಂದ ಭಾರವಾಗಿದೆಯೋ, ಜನರಿಂದ ಭಾರವಾಗಿದೆಯೋ?
‘ಧರ್ಮಕ್ಕೆ’ ಸಿಕ್ಕಸಿಕ್ಕದ್ದನ್ನೆಲ್ಲ ಹಂಚುವ ದುಶ್ಚಾಳಿಯ ಮತಹದ್ದುಗಳಿಂದ ಭಾರವಾಗಿದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಕೋಟಿ ರೂಪಾಯಿ; ಇನ್ನೊಂದು ಕೋಟಿ ರ್ತೀನೀಂದ್ರೆ ಬೇಡವಂತೆ?



ಈ ಕೋಟಿಗೇ ನೀವು ಜಿಎಸ್‌ಟಿ (Garments; Shelter; Thali) ಒದಗಿಸಲು ಆಗುತ್ತಿಲ್ಲವಂತಲ್ಲ!

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಹಾಸ್ಯಕಲಾವಿದರ ಬಾಳಲ್ಲಿ ಹೆಚ್ಚಾಗಿ ಕಹಿಯೇ ಇರುತ್ತದಲ್ಲಾ?
ಶಿವನ ಸ್ಫೂರ್ತಿ. ಕೊರಳಲ್ಲಿ ವಿಷವಿದ್ದರೂ ಮೊಗದಲ್ಲಿ ಮುಗುಳ್ನಗೆ!

ಮಲ್ಲಿಕಾರ್ಜುನ, ಸುರಧೇನುಪುರ
ಮಾಡೋನಿಗೆ ಮೂರಾಣೆ, ಹೇಳೋನಿಗೆ ಏಳಾಣೆ. ಕೇಳಿಸಿಕೊಂಡೋನಿಗೆ?
ಇನ್ನುಳಿದ ಆರಾಣೆ ಪ್ಲಸ್ ಜಿಎಸ್‌ಟಿ!

ಸುಂದರ್ ಜಿ.ಕೆ.
ವಾಸ್ತು ಪ್ರಕಾರ ಹೆಂಡತಿ ಗಂಡನ ಬಲಗಡೆ ಮಲಗಬೇಕೋ, ಎಡಗಡೆಯೋ?
ಗಂಡ ಮಾಮೂಲೋ, ಎಡಚನೋ ಎನ್ನುವುದರ ಮೇಲೆ ವಾಸ್ತು ನಿರ್ಧಾರವಾಗುತ್ತದೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ದೇಶದಲ್ಲಿ ಎಲ್ಲಾ ಬಾರ್‌ಗಳೂ ಲಾಕ್‌ಡೌನ್ ಆದರೆ?
ಲಾಕ್‌ಡೌನ್ ಹಿಂದಿನ ದಿನವೇ ಬಾರ್‌ಗಳು ‘ಕುಡುಕ ವಸತಿ ಗೃಹ’ಗಳಾಗುತ್ತವೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಭಾರತವನ್ನು ಭವ್ಯವಾಗಿಸುವ ಮುಂದಿನ ಜವಾಬ್ದಾರಿಯನ್ನು ಹೊರುವವರು ಯಾರು?
ವಿದ್ಯಾವಂತರಿಗೆ, ಅನುಕೂಲಸ್ಥರಿಗೆ ‘ಮತಗಟ್ಟೆ ಅಲರ್ಜಿ’ ಇರುವುದರಿಂದ ಸ್ಲಮ್ಮಿನವರು!

ಗಂಜಾಂ ನಾಗರಾಜ್, ಮೈಸೂರು
ಸಮುದ್ರದ ನೀರು ಮತ್ತು ಕಣ್ಣೀರು ಎರಡೂ ಉಪ್ಪು. ಏಕೆ?
ಖಾರವಿದ್ದರೆ ಉರಿ; ಸಿಹಿಯಿದ್ದರೆ ನೊಣ, ಇರುವೆಗಳು ಮುತ್ತುವುದರಿಂದ ಉಪ್ಪೇ ಸರಿ.

ಮಹಾವೀರ ಕಾಸರ, ಶಿವಮೊಗ್ಗ
ಆದಾಯಕ್ಕನುಗುಣವಾಗಿ ಖರ್ಚು ಹೊಂದಿಸಬೇಕೋ, ಖರ್ಚಿಗನುಗುಣವಾಗಿ ಆದಾಯ ಹೆಚ್ಚಿಸಿಕೊಳ್ಳಬೇಕೋ?
ಸಂಬಳಿಗನಾದರೆ ಇದು; ಗಿಂಬಳಿಗನಾದರೆ ಅದು.

ವಿಜಯಕುಮಾರ್ ಎಚ್.ಕೆ. ರಾಯಚೂರು
ಅರ್ಹರು ಅರ್ಹರಲ್ಲಿ ಅರ್ಹರಿಗಾಗಿ ಅರ್ಹವಾದುದನ್ನು ಏಕೆ ಬೇಡುತ್ತಿಲ್ಲ ರಾಮ್‌ಜಿ?
ಅರ್ಹರಿಗಾಗಿ ಅರ್ಹವಾದುದನ್ನು ನೀಡುವ ಪೀಠದಿಂದ ಅರ್ಹರು ಬಾಹರ್ ಆಗಿರುವುದರಿಂದ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಸರ್ಕಾರದ ಉಚಿತ ಸೌಲಭ್ಯಗಳಿಂದ ಸೋಮಾರಿಗಳಾದ ಜನರನ್ನು ಕ್ರಿಯಾಶೀಲರಾಗಿಸುವುದು ಹೇಗೆ?
ಆಗಿಸುತ್ತಿದ್ದಾರಲ್ಲ – ಗುಪ್ತವಾಗಿ ರ್‍ಯಾಲಿ, ಸಂಪು, ಹರತಾಳಗಳನ್ನು ಸ್ಪಾನ್ಸರ್ ಮಾಡಿ!

## ವಾರದ ಪ್ರಶ್ನೆ

ಅನಸೂಯ ಟಿ., ಕೇದಿಗೆಮನೆ
ಮಕ್ಕಳಿಗೆ ಆಸ್ತಿ ಕೊಡಬಾರದೆಂಬ ಕಾನೂನನ್ನು ಜಾರಿಗೆ ತಂದರೆ?
ಆ ಕಾನೂನು ಬೇಗ ಜಾರಿಹೋಗುತ್ತದೆ.

ವಿ. ಹೇಮಂತಕುಮಾರ್, ಬೆಂಗಳೂರು
ಈಜಿಪ್ಷಿಯನ್ ಮಮ್ಮಿಗೂ, ಇಂಡಿಯನ್ ಮಮ್ಮಿಗೂ ವ್ಯತ್ಯಾಸವೇನು ಸರ್?
ಈಜಿಪ್ಷಿಯನ್ ಮಮ್ಮಿ ಅಂದರ್ ಹೈ, ಇಂಡಿಯನ್ ಮಮ್ಮಿ ಸುಂದರ್ ಹೈ!

ನಾರಾಯಣ ಯಾಜಿ, ಶಿರಾಲಿ
ರಾಜ್ಯಸಾರಿಗೆ ನಷ್ಟ ತಗ್ಗಿಸಲು ಈಗ ಮಿನಿಟಿಕೆಟ್, ಮುಂದೆ ಮಿನಿ ಬಸ್ ಬರಬಹುದೆ?
ಮಿನಿಸ್ಟೋರ್‌ಗಳಿರುವ ದೊಡ್ಡದಾದ ‘ಶಾಪಿಂಗ್ ವೈಲ್ ಮೂವಿಂಗ್’ ಬಸ್ ಬಂದೀತು.

ಭಾರತೀ ಗಂಗಾಧರ್, ಬೆಂಗಳೂರು
ಚಂದಮಾಮ ತೋರಿಸಿ ಊಟ ಮಾಡಿಸುತ್ತಿದ್ದ ಅಮ್ಮಂದಿರು ಈಗ ಮೊಬೈಲ್ ತೋರಿಸುವರಲ್ಲ?



ತಾನು ಕಾಣುವುದನ್ನೇ ಮಗುವಿಗೂ ತೋರಿಸುವುದು ಮಾತೃಧರ್ಮ.

ಜಿ.ಪ್ರದೀಪಕುಮಾರ್, ಹೂವಿನಹಡಗಲಿ
ಅಡಿಗಲ್ಲು ಸಮಾರಂಭಕ್ಕೆ ರಾಜಕಾರಣಿಗಳನ್ನೇ ಕರೆಯಲು ಕಾರಣವೇನು?
ಅಡಿಗಡಿಗೂ ಕಲ್ಲು ಹಾಕುವುದರಲ್ಲಿ ಪರಿಣತರಾದ್ದರಿಂದ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನಮ್ಮ ಜೀವನಕ್ಕೆ ಬೇಕಾದ ಉತ್ಕೃಷ್ಟ ಆಯುಧ ಯಾವುದು?
ಆರೋಗ್ಯಕರ ಮನಸ್ಸು.

ಬಾ.ರಂ. ಸುರೇಶ್, ಶಿವಮೊಗ್ಗ
ಹೆಣ್ಣು, ಹೊನ್ನು, ಮಣ್ಣು, ಹೆಂಡ ಇವುಗಳು ಒಟ್ಟಿಗೆ ಸೇರಿದರೆ ಏನಾಗುತ್ತದೆ?
ಚುನಾವಣಾ ಸಮಯ.

■ **ರಾಮ್**